KAMS610022822024

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ., ಪಿರಿಯಾಪಟ್ಟಣ.**

**-: ಉಪಸ್ಥಿತರು :-**

ಶ್ರೀ ಯೋಗೇಶ ಎಂ.ಆರ್., ಬಿ.ಎ.ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

ದಿನಾಂಕ 02 ನೇ ಏಪ್ರಿಲ್ 2026.

**ಕ್ರಿಮಿನಲ್ ಪ್ರಕರಣ ಸಂಖ್ಯೆ: 747/2024**

ಪಿರ್ಯಾದಿದಾರರು: ರಾಜ್ಯದ ಪರ ಪಿರಿಯಾಪಟ್ಟಣ ಠಾಣಾ ಆರಕ್ಷಕರು
( ಸಹಾಯಕ ಸರ್ಕಾರಿ ಅಭಿಯೋಜಕರವರಿಂದ )

**ವಿರುದ್ಧ**

ಆರೋಪಿಗಳು :

1. ಚಂದ್ರು ಕೆ ಬಿನ್ ಕುಮಾರ,
ವಯಸ್ಸು 31 ವರ್ಷ,

2. ಪುಟ್ಟಯ್ಯ ಬಿನ್ ಅಣ್ಣಯ್ಯ,
ವಯಸ್ಸು 48 ವರ್ಷ,

3. ಶ್ರೀನಿವಾಸ ಬಿನ್ ಲೇ.ಅಣ್ಣಯ್ಯ,
ವಯಸ್ಸು 47 ವರ್ಷ,

4. ಪವನ್ ಕುಮಾರ್ ಪಿ ಬಿನ್ ಪುಟ್ಟಯ್ಯ,
ವಯಸ್ಸು 22 ವರ್ಷ,

5. ವಿಷ್ಣು ಕೆ ಬಿನ್ ಕೃಷ್ಣ ಬೋವಿ,
ವಯಸ್ಸು 21 ವರ್ಷ,

6. ಪ್ರಸನ್ನ ಬಿನ್ ಕುಮಾರ,
ವಯಸ್ಸು 22 ವರ್ಷ,

7. ಪ್ರವೀಣ ಬಿನ್ ಕುಮಾರ,
ವಯಸ್ಸು 21 ವರ್ಷ,

ಆ-5 ರಿಂದ 7 ರವರ ವಾಸಃ
ವಡ್ಡರ ಪಾಳ್ಯ ಗ್ರಾಮ,
ಹೆಚ್.ಡಿ.ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

8. ಕಿರಣ ಬಿನ್ ಚನ್ನಪ್ಪ,
ವಯಸ್ಸು 40 ವರ್ಷ,

ಆ-1 ರಿಂದ 4 ಹಾಗೂ 8 ರವರ ವಾಸಃ
ಮಾಕನಹಳ್ಳಿ ಪಾಳ್ಯ ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

*(ಆರೋಪಿಗಳ ಪರವಾಗಿ ಶ್ರೀ **ಐ.ಆರ್.ಎಸ್.,** ವಕೀಲರು )*

| | | |
|---|---|---|
| **1.** ಕೃತ್ಯ ನಡೆದ ದಿನಾಂಕ | : | 28.05.2024 |
| **2.** ಕೃತ್ಯ ವರದಿ ಮಾಡಿದ ದಿನಾಂಕ | : | 29.05.2024 |
| **3.** ದೂರುದಾರರ ಹೆಸರು | : | ರಾಕೇಶ ಎಂ |
| **4.** ಸಾಕ್ಷಿದಾರರ ಹೇಳಿಕೆಯ ದಿನಾಂಕ | : | 13.02.2026 |

| | | | |
|---|---|---|---|
| 5. | ಸಾಕ್ಷಿದಾರರ ಹೇಳಿಕೆಯು ಮುಕ್ತಾಯವಾದ ದಿನಾಂಕ | : | 13.02.2026 |
| 6. | ಆಪಾದಿಸಲಾದ ಕಲಂಗಳು | : | ಭಾರತ ದಂಡ ಸಂಹಿತೆ ಕಲಂ.144, 148 ಹಾಗೂ 341, 324, 326, 323, 354, 114 ಮತ್ತು 506 ಸಹವಾಚಕ 149. |
| 7. | ನ್ಯಾಯಾಲಯದ ತೀರ್ಮಾನ | : | ನಿರ್ದೋಷಿಗಳು. |

Digitally signed by YOGESH M R
Location: PRL.CIVIL JUDGE AND JMFC., PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

## -: ತೀರ್ಪು :-

ಪಿರಿಯಾಪಟ್ಟಣ ಪೊಲೀಸ್ ಉಪ ನಿರೀಕ್ಷಕರು, ಆರೋಪಿಗಳ ವಿರುದ್ಧ ಭಾರತ ದಂಡ ಸಂಹಿತೆ ಕಲಂ.144, 148 ಹಾಗೂ 341, 324, 326, 323, 354, 114 ಮತ್ತು 506 ಸಹವಾಚಕ 149 ರಡಿಯಲ್ಲಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

2. **<u>ಮಾನ್ಯ ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿರುತ್ತಿದೆ</u>** :-

ದಿನಾಂಕ: 28.05.2024 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ, ಪಿರಿಯಾಪಟ್ಟಣ ಠಾಣಾ ಸರಹದ್ದು ಮಾಕನಹಳ್ಳಿ ಪಾಳ್ಯದ 2 ನೇ ಆರೋಪಿಯ ಮನೆಯ ಮುಂದಿನ ರಸ್ತೆಯಲ್ಲಿ ಚಾಸಾ.1 ರಾಕೇಶ ಎಂ ರವರು ನಡೆದುಕೊಂಡು ಹೋಗುತ್ತಿದ್ದಾಗ, 1 ರಿಂದ 7 ನೇ ಆರೋಪಿಗಳು ತಮ್ಮ ಕೈಗಳಲ್ಲಿ ಮಾರಕಾಸ್ತ್ರಗಳಾದ ಕಬ್ಬಿಣದ ರಾಡು ಮತ್ತು ದೊಣ್ಣೆಯನ್ನು ಹಿಡಿದುಕೊಂಡು ಅಕ್ರಮ ಕೂಟ ಕಟ್ಟಿಕೊಂಡು ಬಂದು ದೊಂಬಿ ಮತ್ತು ಗಲಾಟೆಯನ್ನುಂಟು ಮಾಡಿರುತ್ತಾರೆ. ನಂತರ 1 ರಿಂದ 7 ನೇ ಆರೋಪಿಗಳು ಚಾಸಾ.1 ರಾಕೇಶ ಎಂ ರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ಅಕ್ರಮ ತಡೆವುಂಟು ಮಾಡಿ, 1 ನೇ ಆರೋಪಿಯು ಕಬ್ಬಿಣದ ರಾಡಿನಿಂದ ಚಾಸಾ.1 ರಾಕೇಶ ಎಂ ರವರ ತಲೆಯ ಹಿಂಭಾಗದ ಬಲ ಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತ ಗಾಯವನ್ನುಂಟು ಮಾಡಿರುತ್ತಾರೆ. 5 ನೇ ಆರೋಪಿಯು ಜಗಳ ಬಿಡಿಸಲು ಬಂದ ಚಾಸಾ.2 ರೋಹಿತ್ ಆರ್ ರವರಿಗೆ ಒಂದು ದೊಣ್ಣೆಯಿಂದ ಅವರ ತಲೆಗೆ ಹೊಡೆದು ತೀವ್ರ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತಾರೆ.

ನಂತರ 2 ನೇ ಆರೋಪಿಯು ತಮ್ಮ ಕೈಗಳಿಂದ ಚಾಸಾ.1 ರಾಕೇಶ ಎಂ ರವರ ಮೈಕೈಗೆ ಹೊಡೆದಿದ್ದು, 3 ನೇ ಆರೋಪಿಯು ತಮ್ಮ ಕಾಲಿನಿಂದ ಚಾಸಾ.1 ರಾಕೇಶ ಎಂ ರವರ ಮೈಕೈಗೆ ಒದ್ದಿದ್ದು, 4 ನೇ ಆರೋಪಿಯು

ಚಾಸಾ.1 ರಾಕೇಶ ಎಂ ರವರ ಬೆನ್ನಿಗೆ ಕಾಲಿನಿಂದ ಒದ್ದಿದ್ದು ಹಾಗೂ 6ನೇ ಮತ್ತು 7 ನೇ ಆರೋಪಿಗಳು ಚಾಸಾ.2 ರೋಹಿತ್ ಆರ್ ರವರ ಮುಖಕ್ಕೆ ಗುದ್ದಿದ್ದು, ಇದರಿಂದ ಚಾಸಾ.1 ರಾಕೇಶ ಎಂ ಮತ್ತು ಚಾಸಾ.2 ರೋಹಿತ್ ಆರ್ ರವರಿಗೆ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. 1ನೇ ಮತ್ತು 2ನೇ ಆರೋಪಿಗಳು ಚಾಸಾ.3 ಗೀತಾ ರವರ ನೈಟಿಯನ್ನು ಹಿಡಿದು ಎಳೆದಾಡಿ ಹರಿದು ಹಾಕಿರುತ್ತಾರೆ. 8ನೇ ಆರೋಪಿಯು ಈ ನನ್ನ ಮಗನದು ಅತಿಯಾಯಿತು ಈ ನನ್ನ ಮಗನನ್ನು ಹೊಡೆದು ಸಾಯಿಸಿ, ಏನಾದರೂ ತಾನು ಜಯಿಸಿಕೊಳ್ಳುತ್ತೇನೆಂದು ಗಲಾಟೆ ಮಾಡಲು ಹಾಗೂ ಮೇಲ್ಕಂಡ ಕೃತ್ಯವನ್ನು ಎಸಗಲು ಉಳಿದ ಆರೋಪಿಗಳಿಗೆ ಕಮ್ಮಕ್ಕು ನೀಡಿರುತ್ತಾರೆ. 1 ರಿಂದ 7ನೇ ಆರೋಪಿಗಳು ಚಾಸಾ.1 ರಾಕೇಶ ಎಂ ಮತ್ತು ಚಾಸಾ.2 ರೋಹಿತ್ ಆರ್ ರವರಿಗೆ ನನ್ನ ಮಗನೇ ಈ ದಿನ ನಮ್ಮಿಂದ ತಪ್ಪಿಸಿಕೊಂಡಿದ್ದೀರಿ ನಿಮ್ಮನ್ನು ಇಂದಲ್ಲಾ ನಾಳೇ ಕೊಲೆ ಮಾಡದೇ ಬಿಡುವುದಿಲ್ಲವೆಂದು ಪ್ರಾಣಾ ಬೆದರಿಕೆ ಹಾಕಿರುತ್ತಾರೆಂದು ಆರೋಪಿಗಳ ವಿರುದ್ಧ ಪಿರಿಯಾಪಟ್ಟಣ ಠಾಣಾ ಆರಕ್ಷಕರು ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

**3.** ಪಿರಿಯಾಪಟ್ಟಣ ಪೊಲೀಸ್ ಠಾಣಾಧಿಕಾರಿಗಳು, ಚಾಸಾ.12 ರಾಜೇಶ್ ಕುಮಾರ್ ಎಸ್ ರವರು, ಠಾಣಾ ಉಸ್ತುವಾರಿಯಲ್ಲಿದ್ದಾಗ, ಚಾಸಾ.1 ರಾಕೇಶ್ ಎಂ ರವರು ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ:128/2024 ರಂತೆ ಪ್ರಥಮ ವರ್ತಮಾನ

ವರದಿಯನ್ನು ದಾಖಲಿಸಿರುತ್ತಾರೆ. ನಂತರ ಚಾಸಾ.13 ನವ್ಯ ಎಲ್ ರವರು., ಸಾಕ್ಷಿದಾರರ ಹೇಳಿಕೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪಡೆದು ತನಿಖೆಯನ್ನು ಪೂರ್ಣಗೊಳಿಸಿ, ನ್ಯಾಯಾಲಯಕ್ಕೆ ಆರೋಪಿಗಳ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**4.** ತನಿಖಾಧಿಕಾರಿಯು ಅಂತಿಮ ವರದಿಯನ್ನು ಸಲ್ಲಿಸಿದ ನಂತರ, ನ್ಯಾಯಾಲಯವು ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಮೇಲ್ಕಂಡ ಕಲಂಗಳ ಅಡಿಗಳಲ್ಲಿ ಸಂಜ್ಞಾನವನ್ನು ತೆಗೆದುಕೊಂಡಿರುತ್ತದೆ.

**5.** ಆರೋಪಿಗಳು ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207ರ ಅನ್ವಯ, ಅವರಿಗೆ ಅಂತಿಮ ವರದಿಯ ಪ್ರತಿಯನ್ನು ನೀಡಲಾಗಿದೆ. ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಿ, ನಂತರ ಭಾರತ ದಂಡ ಸಂಹಿತೆ ಕಲಂ.144, 148 ಹಾಗೂ 341, 324, 326, 323, 354, 114 ಮತ್ತು 506 ಸಹವಾಚಕ 149 ರಡಿಗಳಲ್ಲಿ ಶಿಕ್ಷಿಸಬಹುದಾದ ದೋಷಾರೋಪಣೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಲಾಯಿತು. ಆರೋಪಿಗಳು ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ಕೇಳಿಕೊಂಡಿರುತ್ತಾರೆ.

**6.** ಆರೋಪಿಗಳ ವಿರುದ್ಧ ಮಾಡಿರುವ ದೋಷಾರೋಪಣೆಯನ್ನು ಸಾಭೀತುಪಡಿಸುವ ಉದ್ದೇಶದಿಂದ, ಮಾನ್ಯ ಅಭಿಯೋಜನೆಯು ತಮ್ಮ ಪರವಾಗಿ ಅಂತಿಮ ವರದಿಯಲ್ಲಿ ನಮೂದಿಸಿರುವ 13 ಸಾಕ್ಷಿಗಳ ಪೈಕಿ 3 ಸಾಕ್ಷಿಗಳನ್ನು ಪ್ರಾಸಾ.1 ರಿಂದ 3 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿ, ದಾಖಲೆಗಳನ್ನು ಮತ್ತು ಸಹಿಗಳನ್ನು ನಿಪಿ.1 ರಿಂದ 4 ರಂತೆ ಗುರುತಿಸಿಕೊಂಡು, ತಮ್ಮ ಪರ ಸಾಕ್ಷಿಗಳ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತದೆ. ನಂತರ ಮಾನ್ಯ ಅಭಿಯೋಜನೆಯ ಸಾಕ್ಷ್ಯದಲ್ಲಿ, ಆರೋಪಿಗಳಿಗೆ ವ್ಯತಿರಿಕ್ತವಾದ ಯಾವುದೇ ಸಂದರ್ಭಗಳು ಕಂಡುಬಾರದ ಕಾರಣ, ಆರೋಪಿಗಳನ್ನು ದಂ.ಪ್ರ.ಸಂ.ಕಲಂ.313 ರಡಿ ವಿಚಾರಣೆ ಮಾಡುವುದರಿಂದ ವಿನಾಯಿತಿ ನೀಡಲಾಗಿದೆ.

**7.** ಉಭಯ ಪಕ್ಷಗಾರರ ವಕೀಲರುಗಳ ವಾದ-ವಿವಾದಗಳನ್ನು ಆಲಿಸಿ ಮತ್ತು ಸಾಕ್ಷ್ಯಾಧಾರಗಳನ್ನು ಗಮನದಲ್ಲಿರಿಸಿಕೊಂಡು ಅವಲೋಕಿಸಿದಾಗ, ಈ ಪ್ರಕರಣದಲ್ಲಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಅಂಶಗಳು ಈ ಕೆಳಕಂಡಂತಿವೆ.

**<u>ಅಂಶಗಳು</u>**

1. ದಿನಾಂಕ: 28.05.2024 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ, ಪಿರಿಯಾಪಟ್ಟಣ ಠಾಣಾ ಸರಹದ್ದು ಮಾಕನಹಳ್ಳಿ ಪಾಳ್ಯದ 2 ನೇ ಆರೋಪಿಯ ಮನೆಯ ಮುಂದಿನ ರಸ್ತೆಯಲ್ಲಿ ಚಾಸಾ.1 ರಾಕೇಶ ಎಂ ರವರು ನಡೆದುಕೊಂಡು ಹೋಗುತ್ತಿದ್ದಾಗ, 1 ರಿಂದ 7 ನೇ

ಆರೋಪಿಗಳು ಚಾಸಾ.1 ರವರ ಅಣ್ಣ ರಮೇಶ್ ಎಂಬುವವರು ಈ ಹಿಂದೆ 2ನೇ ಆರೋಪಿಯ ನಾದಿನಿ ಮಗಳು ರೋಜ ಎಂಬುವರನ್ನು ಪ್ರೀತಿಸುತ್ತಿದ್ದ ವಿಚಾರದಲ್ಲಿ ಹಳೇ ದ್ವೇಷವನ್ನು ಇಟ್ಟುಕೊಂಡು, 1 ರಿಂದ 7ನೇ ಆರೋಪಿಗಳು ಸಮಾನ ಉದ್ದೇಶದಿಂದ ತಮ್ಮ ಕೈಗಳಲ್ಲಿ ಮಾರಕಾಸ್ತ್ರಗಳಾದ ಕಬ್ಬಿಣದ ರಾಡು ಮತ್ತು ದೊಣ್ಣೆಯನ್ನು ಹಿಡಿದುಕೊಂಡು ಅಕ್ರಮ ಕೂಟ ಕಟ್ಟಿಕೊಂಡು ಬಂದಿದ್ದು, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.144 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7ನೇ ಆರೋಪಿಗಳು ಸಮಾನ ಉದ್ದೇಶದಿಂದ ತಮ್ಮ ಕೈಗಳಲ್ಲಿ ಮಾರಕಾಸ್ತ್ರಗಳಾದ ಕಬ್ಬಿಣದ ರಾಡು ಮತ್ತು ದೊಣ್ಣೆಯನ್ನು ಹಿಡಿದುಕೊಂಡು ಬಂದು ದೊಂಬಿ ಮತ್ತು ಗಲಾಟೆಯನ್ನುಂಟು ಮಾಡಿ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.148 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7ನೇ ಆರೋಪಿಗಳು ಸಮಾನ ಉದ್ದೇಶದಿಂದ ಚಾಸಾ.1 ರಾಕೇಶ ಎಂ ರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ಅಕ್ರಮ ತಡೆವುಂಟು ಮಾಡಿ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.341 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7ನೇ ಆರೋಪಿಗಳು ಸಮಾನ ಉದ್ದೇಶದಿಂದ ಅವರ ಪೈಕಿ 1ನೇ ಆರೋಪಿಯು ಕಬ್ಬಿಣದ ರಾಡಿನಿಂದ ಚಾಸಾ.1 ರಾಕೇಶ ಎಂ ರವರ ತಲೆಯ ಹಿಂಭಾಗದ ಬಲ ಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತ ಗಾಯವನ್ನುಂಟು ಮಾಡಿ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.324 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**5.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7ನೇ ಆರೋಪಿಗಳು ಸಮಾನ ಉದ್ದೇಶದಿಂದ ಅವರ ಪೈಕಿ 5ನೇ ಆರೋಪಿಯು ಜಗಳ ಬಿಡಿಸಲು ಬಂದ ಚಾಸಾ.2 ರೋಹಿತ್ ಆರ್ ರವರಿಗೆ ಒಂದು ದೊಣ್ಣೆಯಿಂದ ಅವರ ತಲೆಗೆ ಹೊಡೆದು ತೀವ್ರ ಸ್ವರೂಪದ ರಕ್ತಗಾಯವನ್ನುಂಟು ಮಾಡಿ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.326 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**6.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7ನೇ ಆರೋಪಿಗಳು ಸಮಾನ ಉದ್ದೇಶದಿಂದ ಅವರ ಪೈಕಿ 2ನೇ ಆರೋಪಿಯು ತಮ್ಮ ಕೈಗಳಿಂದ ಚಾಸಾ.1 ರಾಕೇಶ ಎಂ ರವರ ಮೈಕೈಗೆ ಹೊಡೆದಿದ್ದು, 3ನೇ ಆರೋಪಿಯು ತಮ್ಮ ಕಾಲಿನಿಂದ ಚಾಸಾ.1 ರಾಕೇಶ ಎಂ ರವರ ಮೈಕೈಗೆ ಒದ್ದಿದ್ದು, 4ನೇ ಆರೋಪಿಯು ಚಾಸಾ.1 ರಾಕೇಶ ಎಂ ರವರ ಬೆನ್ನಿಗೆ ಕಾಲಿನಿಂದ ಒದ್ದಿದ್ದು ಹಾಗೂ 6ನೇ ಮತ್ತು 7 ನೇ ಆರೋಪಿಗಳು ಚಾಸಾ.2 ರೋಹಿತ್ ಆರ್

ರವರ ಮುಖಕ್ಕೆ ಗುದ್ದಿದ್ದು, ಇದರಿಂದ ಚಾಸಾ.1 ರಾಕೇಶ ಎಂ ಮತ್ತು ಚಾಸಾ.2 ರೋಹಿತ್ ಆರ್ ರವರಿಗೆ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**7.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7ನೇ ಆರೋಪಿಗಳು ಸಮಾನ ಉದ್ದೇಶದಿಂದ ಅವರ ಪೈಕಿ 1ನೇ ಮತ್ತು 2ನೇ ಆರೋಪಿಗಳು ಚಾಸಾ.3 ಗೀತಾ ರವರ ನೈಟಿಯನ್ನು ಹಿಡಿದು ಎಳೆದಾಡಿ ಹರಿದು ಹಾಕಿ ಅವರ ಹೆಣ್ಣುತನಕ್ಕೆ ಅಪಮಾನ ಮಾಡಿ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.354 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**8.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 8ನೇ ಆರೋಪಿಗಳು ಸಮಾನ ಉದ್ದೇಶದಿಂದ ಅವರ ಪೈಕಿ, 8ನೇ ಆರೋಪಿಯು ಈ ನನ್ನ ಮಗನದು ಅತಿಯಾಯಿತು ಈ ನನ್ನ ಮಗನನ್ನು ಹೊಡೆದು ಸಾಯಿಸಿ, ಏನಾದರೂ ನಾನು ಜಯಿಸಿಕೊಳ್ಳುತ್ತೇನೆಂದು ಗಲಾಟೆ ಮಾಡಲು ಹಾಗೂ ಮೇಲ್ಕಂಡ ಕೃತ್ಯವನ್ನು ಎಸಗಲು ಉಳಿದ ಆರೋಪಿಗಳಿಗೆ ಕಮ್ಮಕ್ಕು ನೀಡಿದ್ದು, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.114 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**9.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 7 ನೇ ಆರೋಪಿಗಳು ಸಮಾನ ಉದ್ದೇಶದಿಂದ, ನನ್ನ ಮಗನೇ ಈ ದಿನ ನಮ್ಮಿಂದ ತಪ್ಪಿಸಿಕೊಂಡಿದ್ದೀರಿ ನಿಮ್ಮನ್ನು ಇಂದಲ್ಲಾ ನಾಳೇ ಕೊಲೆ ಮಾಡದೇ ಬಿಡುವುದಿಲ್ಲವೆಂದು ಚಾಸಾ.1 ರಾಕೇಶ ಎಂ ಮತ್ತು ಚಾಸಾ.2 ರೋಹಿತ್ ಆರ್ ರವರಿಗೆ ಪ್ರಾಣಾ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**10.** ಯಾವ ಆದೇಶ ?

8. ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಗಳು

ಅಂಶ-1 ರಿಂದ 9 : **"ನಕಾರಾತ್ಮಕವಾಗಿ"**

ಅಂಶ-10 : ಅಂತಿಮ ಆದೇಶದಂತೆ,

ಈ ಕೆಳಕಂಡ,

## ಕಾ ರ ಣ ಗ ಳು

**ಅಂಶ-1 ರಿಂದ 9 :-**

9. ಈ ಎಲ್ಲ ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ, ಸಾಕ್ಷ್ಯದ ವಿಮರ್ಶೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಚರ್ಚಿಸಲು ಒಟ್ಟಿಗೆ ಪರಿಗಣಿಸಲಾಗಿದೆ.

10. ಮಾನ್ಯ ಅಭಿಯೋಜನೆಯು ತಮ್ಮ ದೋಷಾರೋಪಣೆಯನ್ನು ಸಾಭೀತುಪಡಿಸಲು ಈ ಪ್ರಕರಣದ

ದೂರುದಾರರಾದ ಚಾಸಾ.1 ರಾಕೇಶ ರವರನ್ನು ಪ್ರಾಸಾ.1 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ತನಗೆ ಆರೋಪಿಗಳ ಪರಿಚಯವಿದೆ. ಈ ಪ್ರಕರಣದ ವಿಷಯ ತನಗೆ ಗೊತ್ತಿಲ್ಲ. ಆರೋಪಿಗಳು ತಮ್ಮೊಂದಿಗೆ ಯಾವತ್ತೂ ಸಹ ಜಗಳ ಮಾಡಿಲ್ಲ. ಕಬ್ಬಿಣದ ರಾಡು ಮತ್ತು ದೊಣ್ಣೆಯಿಂದ ಹೊಡೆದಿಲ್ಲ, ತಬ್ಬಿಕೊಂಡು ಕೈಯಿಂದ ಹೊಡೆದಿಲ್ಲ, ಒದ್ದಿಲ್ಲ ಹಾಗೂ ಚಾಸಾ.3 ರವರ ನೈಟಿ ಹಿಡಿದುಕೊಂಡು ಎಳೆದಾಡಿಲ್ಲ ಹಾಗೂ ತಮಗೆ ಕೊಲೆ ಬೆದರಿಕೆ ಹಾಕಿಲ್ಲ. ತಾನು ಆರೋಪಿಗಳ ವಿರುದ್ಧ ಯಾವುದೇ ದೂರು ನೀಡಿಲ್ಲ. ದೂರನ್ನು ನಿಪಿ.1 ಎಂದು, ತಮ್ಮ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಗಿದೆ. ನಿಪಿ.1 ರಲ್ಲಿ ಬರೆದಿರುವ ವಿಷಯಗಳು ತನಗೆ ಗೊತ್ತಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.1 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿರುತ್ತಾರೆ. ಪ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ, ತಾವು ಮತ್ತು ಆರೋಪಿಗಳು ಪರಸ್ಪರ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ ಎಂದು ಒಪ್ಪುತ್ತಾರೆ. ಉಳಿದಂತೆ ಮಾನ್ಯ ಅಭಿಯೋಜನೆಯು ಸೂಚಿಸಿದ ಎಲ್ಲ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

**11.** ಇನ್ನೂ ಚಾಸಾ.2 ರೋಹಿತ್ ರವರನ್ನು ಪ್ರಾಸಾ.2 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಗಳು ತಮ್ಮೊಂದಿಗೆ ಯಾವತ್ತೂ ಸಹ ಜಗಳ ಮಾಡಿಲ್ಲ. ಕಬ್ಬಿಣದ ರಾಡು ಮತ್ತು ದೊಣ್ಣೆಯಿಂದ ಹೊಡೆದಿಲ್ಲ, ತಬ್ಬಿಕೊಂಡು ಕೈಯಿಂದ ಹೊಡೆದಿಲ್ಲ, ಒದ್ದಿಲ್ಲ ಹಾಗೂ ಚಾಸಾ.3 ರವರ ನೈಟಿ ಹಿಡಿದುಕೊಂಡು ಎಳೆದಾಡಿಲ್ಲ ಹಾಗೂ ತಮಗೆ ಕೊಲೆ ಬೆದರಿಕೆ ಹಾಕಿಲ್ಲ. ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.2 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿರುತ್ತಾರೆ. ಪ್ರಾಸಾ.2 ರವರು ತಮ್ಮ ಪಾಟೀ ಸವಾಲಿನಲ್ಲಿ, ತಾವು ಮತ್ತು ಆರೋಪಿಗಳು ಪರಸ್ಪರ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ ಎಂದು ಒಪ್ಪುತ್ತಾರೆ. ಉಳಿದಂತೆ ಮಾನ್ಯ ಅಭಿಯೋಜನೆಯು ಸೂಚಿಸಿದ ಎಲ್ಲ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

**12.** ಇನ್ನೂ ಚಾಸಾ.3 ಗೀತಾ ರವರನ್ನು ಪ್ರಾಸಾ.3 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಗಳು ತಮ್ಮೊಂದಿಗೆ ಯಾವತ್ತೂ ಸಹ ಜಗಳ

ಮಾಡಿಲ್ಲ. ಕಬ್ಬಿಣದ ರಾಡು ಮತ್ತು ದೊಣ್ಣೆಯಿಂದ ಹೊಡೆದಿಲ್ಲ, ತಬ್ಬಿಕೊಂಡು ಕೈಯಿಂದ ಹೊಡೆದಿಲ್ಲ, ಒದ್ದಿಲ್ಲ ಹಾಗೂ ತನ್ನ ನೈಟಿ ಹಿಡಿದುಕೊಂಡು ಎಳೆದಾಡಿಲ್ಲ ಹಾಗೂ ತಮಗೆ ಕೊಲೆ ಬೆದರಿಕೆ ಹಾಕಿಲ್ಲ. ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಮಹಜರನ್ನು ನಿಪಿ.3 ಎಂದು, ತಮ್ಮ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಗಿದೆ. ನಿಪಿ.3 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.3 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿರುತ್ತಾರೆ. ಪ್ರಾಸಾ.3 ರವರು ತಮ್ಮ ಪಾಟೀ ಸವಾಲಿನಲ್ಲಿ, ತಾವು ಮತ್ತು ಆರೋಪಿಗಳು ಪರಸ್ಪರ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ ಎಂದು ಒಪ್ಪುತ್ತಾರೆ. ಉಳಿದಂತೆ ಮಾನ್ಯ ಅಭಿಯೋಜನೆಯು ಸೂಚಿಸಿದ ಎಲ್ಲ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

**13.** ಪ್ರಮುಖ ಸಾಕ್ಷಿದಾರರಾದ ಪ್ರಾಸಾ.1 ರಿಂದ 3 ರವರೇ ಮಾನ್ಯ ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸದಿದ್ದ ಕಾರಣ, ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನ ಆಗದೇ ಇರುವುದರಿಂದ, ಉಳಿದ ಎಲ್ಲ ಸಾಕ್ಷಿಗಳನ್ನು ಕೈ ಬಿಡಲಾಯಿತು. ಹೀಗಾಗಿ, ಆರೋಪಿಗಳ ವಿರುದ್ಧವಾಗಿ ಹೊರಿಸಿದ ಆರೋಪಗಳಿಗೆ

ಯಾವುದೇ ಸಾಕ್ಷ್ಯವಿಲ್ಲದಿದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿನ ಆರೋಪಿಗಳ ಹೇಳಿಕೆಯನ್ನು ಸಹ ಕೈ ಬಿಡಲಾಯಿತು. ಆದ್ದರಿಂದ, ಆರೋಪಿಗಳನ್ನು ಶಿಕ್ಷಿಸಲು ಯಾವುದೇ ಸಾಕ್ಷ್ಯವಿರುವುದಿಲ್ಲ ಮತ್ತು ಆರೋಪಿಗಳು ಖುಲಾಸೆಗೊಳ್ಳಲು ಅರ್ಹರಿರುತ್ತಾರೆಂದು ಅಭಿಪ್ರಾಯಪಟ್ಟು, ಮಾನ್ಯ ಅಭಿಯೋಜನೆಯು ತಮ್ಮ ವಾದವನ್ನು ಪುಷ್ಠೀಕರಿಸಲು ವಿಫಲವಾಗಿದೆ ಎಂಬ ಅಭಿಪ್ರಾಯದ ಮೇರೆಗೆ, ನ್ಯಾಯಾಲಯವು ಮೇಲಿನ 1 ರಿಂದ 9 ನೇ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**ಅಂಶ-10:-**

**14.** ಮೇಲಿನ ಅಂಶ-1 ರಿಂದ 9 ರಲ್ಲಿ ಚರ್ಚಿಸಿದ ಕಾರಣಗಳಿಂದ, ಈ ಕೆಳಕಂಡಂತೆ;

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1)ರಡಿ, ಆರೋಪಿಗಳನ್ನು ಭಾರತ ದಂಡ ಸಂಹಿತೆ ಕಲಂ.144, 148 ಹಾಗೂ 341, 324, 326, 323, 354, 114 ಮತ್ತು 506 ಸಹವಾಚಕ 149 ರಡಿಯಲ್ಲಿ ಆರೋಪಿಸಲಾದ ಶಿಕ್ಷಾರ್ಹ ಅಪರಾಧಗಳು ಸಾಬೀತಾಗಿಲ್ಲವೆಂದು ಪರಿಗಣಿಸಿ, ಬಿಡುಗಡೆ ಮಾಡಲಾಗಿದೆ.

ಆರೋಪಿಗಳ ಬಂಧಪತ್ರಗಳು ಮತ್ತು ಅವರ ಜಾಮೀನುದಾರರ ಬಂಧಪತ್ರಗಳು ಮುಂದಿನ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತವೆ.

ಪಿ.ಎಫ್.ಸಂ.94/2024 ರಲ್ಲಿರುವ ಒಂದು ಕಬ್ಬಿಣದ ರಾಡು ಮೌಲ್ಯವುತ್ತವಾದ ವಸ್ತುವಾದ್ದರಿಂದ, ಅದನ್ನು ಮೇಲ್ಮನವಿ ಅವಧಿ ಮುಗಿದ ನಂತರ ದಂ.ಪ್ರ.ಸಂಹಿತೆ ಅಧ್ಯಾಯ 34ರ ರೀತ್ಯಾ ವಿಲೇವಾರಿ ಮಾಡಲು ಆದೇಶಿಸಲಾಗಿದೆ.

ಪಿ.ಎಫ್.ಸಂ.94/2024 ರಲ್ಲಿರುವ ಒಂದು ಮರದ ದೊಣ್ಣೆ, ಒಂದು ನೈಟಿ ಹಾಗೂ ಒಂದು ಟೀ ಶರ್ಟ್ ಮೌಲ್ಯರಹಿತವಾದ ವಸ್ತುಗಳಾದ್ದರಿಂದ, ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಕಚೇರಿಗೆ ಆದೇಶಿಸಲಾಗಿದೆ.

*(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ನೀಡಿ, ನಂತರ ಅದು ನನ್ನಿಂದ ಪರಿಷ್ಕರಿಸಲ್ಪಟ್ಟು, ಈ ದಿನಾಂಕ **02 ನೇ ಏಪ್ರಿಲ್ 2026** ಇಸವಿಯಂದು ತೆರೆದ ನ್ಯಾಯಾಲಯದಲ್ಲಿ ಓದಲಾಯಿತು)*

Digitally signed by YOGESH M R
Location: PRL.CIVIL JUDGE AND JMFC., PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

**-: ಅನುಬಂಧ :-**

**ಅಭಿಯೋಜನೆಯವರ ಪರ ಮಾಡಿಸಲಾದ ಸಾಕ್ಷಿಗಳ ಪಟ್ಟಿ :-**

| | | |
|---|---|---|
| ಪ್ರಾಸಾ.1 | - | ರಾಕೇಶ |
| ಪ್ರಾಸಾ.2 | - | ರೋಹಿತ್ |
| ಪ್ರಾಸಾ.3 | - | ಗೀತಾ |

**ಅಭಿಯೋಜನೆಯವರ ಪರವಾಗಿ ಪ್ರದರ್ಶಿಕೆ ಮಾಡಲಾದ ದಾಖಲೆಗಳು :-**

| | | |
|---|---|---|
| ನಿಪಿ.1 | - | ದೂರು |
| ನಿಪಿ.1(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.2 | - | ಪ್ರಾಸಾ.2 ರವರ ಹೇಳಿಕೆ |
| ನಿಪಿ.3 | - | ಸ್ಥಳ ಮಹಜರ್ |
| ನಿಪಿ.3(ಎ) | - | ಪ್ರಾಸಾ.3 ರವರ ಸಹಿ |
| ನಿಪಿ.4 | - | ಪ್ರಾಸಾ.3 ರವರ ಹೇಳಿಕೆ |

**ಅಭಿಯೋಜನೆಯವರ ಪರ ಗುರುತಿಸಲಾದ ಮುದ್ದೆಮಾಲುಗಳು** : ಇಲ್ಲ

**ಆರೋಪಿಗಳ ಪರ ವಿಚಾರಣೆಯಾದ ಸಾಕ್ಷಿದಾರರು** : ಇಲ್ಲ

**ಆರೋಪಿಗಳ ಪರ ಪ್ರದರ್ಶಿಕೆ ಮಾಡಲಾದ ದಾಖಲೆಗಳು** : ಇಲ್ಲ

Digitally signed by YOGESH M R
Location: PRL.CIVIL JUDGE AND JMFC., PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.